

# ಸೂಕ್ಷ್ಮ ಕಣ್ಣಿನ ಸಂವೇದನೆ

■ ಭರತ್‌ರಾಜ್ ಕೆರೆಮನೆ

**ಚಿ**ಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನಲ್ಲಿ ಹುಟ್ಟಿ ಬೆಳೆದು ಈಗ ಬೆಂಗಳೂರು ವಾಸಿಯಾಗಿರುವ ರವಿಪ್ರಕಾಶ್, ಮ್ಯಾಕ್ರೊ ಫೋಟೋಗ್ರಫಿ (ಅಂದರೆ ಸಣ್ಣ ವಸ್ತುಗಳ ಮೇಲೆ ಗಮನ ಕೇಂದ್ರೀಕರಿಸುವುದು) ಒಲವು ಬೆಳೆಸಿಕೊಂಡವರು. ಹೈಸ್ಕೂಲ್ ನಲ್ಲಿರುವಾಗಲೇ ಕ್ಯಾಮೆರಾ ಗೀಳು ಹಚ್ಚಿಕೊಂಡ ರವಿಪ್ರಕಾಶ್, ಕಳೆದ 10 ವರ್ಷಗಳ ಹಿಂದೆ ಡಿಎಸ್‌ಎಲ್‌ಆರ್ ಕ್ಯಾಮೆರಾ ಖರೀದಿಸಿದ ಬಳಿಕ ಮ್ಯಾಕ್ರೊ ಫೋಟೊಗ್ರಫಿಗೆ ಒತ್ತು ಕೊಟ್ಟವರು.

ಬೆಂಗಳೂರಿನ ಇನ್ನೊಬ್ಬ ಫೋಟೋಗ್ರಾಫರ್ ಗಣೇಶ್ ಹೆಚ್. ಶಂಕರ್ ಅವರಿಂದ ಸ್ಫೂರ್ತಿ ಪಡೆದು **creativenaturephotography.net** ಮೂಲಕ ತನ್ನ ಛಾಯಾಗ್ರಹಣ ಅಭಿರುಚಿಯನ್ನು ಬೆಳೆಸುತ್ತಾ ಹೋದರು. ಕಲಾತ್ಮಕವಾಗಿ ತೆಗೆದ ಫೋಟೊಗಳನ್ನು, ಲಂಡನ್‌ನ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ ಮತ್ತು ಬಿ.ಬಿ.ಸಿ. ಜತೆ ಸೇರಿ ನಡೆಸುವ 'ವೈಲ್ಡ್‌ಲೈಫ್ ಫೋಟೊಗ್ರಾಫರ್ ಆಫ್ ದಿ ಇಯರ್' ಸ್ಪರ್ಧೆಗೆ ಕಳುಹಿಸಿಕೊಟ್ಟರು. 2014ರಲ್ಲಿ ಈ ಸ್ಪರ್ಧೆಗೆ 96 ದೇಶಗಳಿಂದ ಒಟ್ಟು 42000 ಎಂಟ್ರಿಗಳು ಬಂದಿದ್ದವು. ಇವರು ಒಟ್ಟು 18 ಫೋಟೊಗಳನ್ನು ಕಳುಹಿಸಿದ್ದರು. ಅದರಲ್ಲಿ 'ಡಿವೈನ್ ಸ್ನೇಕ್' ಮತ್ತು 'ಪ್ಯೂರ್ ಮ್ಯಾಜಿಕ್' ಎಂಬ ಎರಡು ಫೋಟೋಗಳಿಗೆ ಪ್ರಶಸ್ತಿ ಲಭಿಸಿದೆ. ಈ ಸ್ಪರ್ಧೆಯಲ್ಲಿ ಇದುವರೆಗೆ ಗೆದ್ದಿರುವ ಭಾರತೀಯರು ಮೂವರು ಮಾತ್ರ ಎನ್ನುವುದು ಇವರ ಪ್ರಶಸ್ತಿಯ ಮಹತ್ವವನ್ನು ಎತ್ತಿ ತೋರಿಸುತ್ತದೆ.

'ಡಿವೈನ್ ಸ್ನೇಕ್' ಎನ್ನುವ ಫೋಟೋ ಹಾವಿನ ಕಣ್ಣಿನ ಮೇಲೆಯೇ ಕೇಂದ್ರೀಕರಿಸಿ ತೆಗೆದದ್ದು. ಹಾಗೆಯೇ 'ಪ್ಯೂರ್ ಮ್ಯಾಜಿಕ್' ಫೋಟೊ ಜೇಡರಬಲೆಯ ವಿನ್ಯಾಸದ ಮೇಲೆ ಸೂರ್ಯಕಿರಣ ಬಿದ್ದದ್ದನ್ನು ಕೇಂದ್ರೀಕರಿಸಿ ತೆಗೆದದ್ದು.



ರವಿಪ್ರಕಾಶ್

